ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

## ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ

## ಸೆಷನ್ಸ್ ಕೇಸ್ ನಂಬರ್ : 252/2022

**ಫ್ರಾಸಾ-7 ಚಾಸಾ- 7**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಸಂತೋಷ |
| ತಂದೆಯ ಹೆಸರುಃ | : | ಕೆಂಚಪ್ಪ |
| ವಯಸ್ಸುಃ | : | 30 ವರ್ಷ |
| ಉದ್ಯೋಗಃ | : | ವ್ಯವಸಾಯ |
| ವಾಸ | : | ಕಿತ್ತಗಳಲೆ ಗ್ರಾಮ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:11-06-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ನನಗೆ ಚಾಸಾ-1 ರಿಂದ 4ರವರ ಪರಿಚಯವಿಲ್ಲ. ಚಾಸಾ-6ರವರ ಪರಿಚಯವಿದೆ. ಆರೋಪಿ ಸತೀಶನ ಪರಿಚಯವಿಲ್ಲ. (ಆರೋಪಿ ಗೈರುಹಾಜರಾಗಿದ್ದು ಆತನ ಗುರುತಿಸುವಿಕೆಗೆ ತಕರಾರಿಲ್ಲವೆಂದು ವಕೀಲರು ಹೇಳಿರುತ್ತಾರೆ.) ಸದರಿ ಆರೋಪಿ ಸತೀಶ ತಂದೆ ಶಿವಮಣಿ ಏನು ಕೆಲಸ ಮಾಡಿಸುತ್ತಾರೆ, ಯಾವ ಊರಿನವರು, ಅವರ ಕೈಕೆಳಗಡೆ ಯಾರು ಯಾರು ಕೆಲಸ ಮಾಡುತ್ತಾರೆ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ಆನಂದ್ ಎಂಬುವವರು ಯಾರು ಎಂದು ನನಗೆ ಗೊತ್ತಿಲ್ಲ. ಅವರು ಇದ್ದಾರೋ ಇಲ್ಲವೋ ಗೊತ್ತಿಲ್ಲ. ಚಾಸಾ-4 ಮತ್ತು 6ರವರ ಮನೆಯ ಗಾರೆ ಕೆಲಸಕ್ಕೆ ಆರೋಪಿ ಬಂದಿದ್ದನೋ ಎಂಬುದು ನನಗೆ ಗೊತ್ತಿಲ್ಲ. ಹಾಗೆಯೇ ಅವನ ಜೊತೆ ಚಾಸಾ-1 ರಿಂದ 3ರವರು ಬಂದಿದ್ದರೋ ಎಂಬುದು ಗೊತ್ತಿಲ್ಲ. ಅವರು ಎಲ್ಲಿ ಮಲಗುತ್ತಿದ್ದರೆಂದು ಗೊತ್ತಿಲ್ಲ. ಚಾಸಾ-4ರವರ ಮನೆಯಲ್ಲಿ ಅವರು ಕೆಲಸ ಮಾಡುತ್ತಿದ್ದರೋ ಎಂದು ನನಗೆ ಗೊತ್ತಿಲ್ಲ. ಆರೋಪಿ ಮತ್ತು ಆನಂದ ಮದ್ಯಪಾನ ಮಾಡಿಕೊಂಡು ಗಲಾಟೆ ಮಾಡುತ್ತಿದ್ದ ವಿಚಾರ ನನಗೆ ಗೊತ್ತಿಲ್ಲ. ಆರೋಪಿ ಆನಂದನಿಗೆ ಹಲ್ಲೆ ಮಾಡಿ ಕೊಲೆ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ.

ನಾನು ಮೃತ ಆನಂದನನ್ನು ನನ್ನ ಆಟೋದಲ್ಲಿ ಕೆ ಹೊಸಕೋಟೆಯಲ್ಲಿರುವ ಮಣಿಪಾಲು ಕ್ಲಿನಿಕ್ ಗೆ ಕರೆದುಕೊಂಡು ಹೋಗಿಲ್ಲ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ**

ದಿಃ5-6-2022ರಂದು ಬೆಳಿಗ್ಗೆ 8 ಗಂಟೆಗೆ ಚಾಸಾ-4ರವರು ತಮ್ಮ ಮನೆಯ ಫೌಂಡೇಷನ್ ಕೆಲಸ ಮಾಡುವ ಆನಂದ ಲೈನ್ ಮನೆ ಮುಂಭಾಗದಲ್ಲಿ ಪೌಂಡೇಷನ್ ಪಕ್ಕದಲ್ಲಿ ಬಿದ್ದಿದ್ದಾನೆ ಅವನನ್ನು ಮಣಿಪಾಲ್ ಕ್ಲಿನಿಕ್ ಗೆ ಕರೆದುಕೊಂಡು ಹೋಗು ಎಂದು ಹೇಳಿದ ಕಾರಣ ಸದರಿ ಆಟೋದಲ್ಲಿ ಕರೆದುಕೊಂಡು ಹೋದೆನು. ಅಲ್ಲಿ ವೈದ್ಯರು ಪರೀಕ್ಷಿಸಿ ಆನಂದ ಮೃತಪಟ್ಟಿದ್ದಾನೆ ಎಂದು ತಿಳಿಸಿದ ಮೇರೆಗೆ ಚಾಸಾ-4ರವರಿಗೆ ವಿಚಾರ ತಿಳಿಸಿದೆನು ಎಂದರೆ ಸರಿಯಲ್ಲ. ನಂತರ ನಾನು ಗಾಬರಿಗೊಂಡು ಶವವನ್ನು ಕೆ.ಹೊಸಕೋಟೆಯ ಹತ್ತಿರ ಇರುವ ರಸ್ತೆಯ ಎಡಬದಿಯ ಮರದ ಕೆಳಗೆ ಮಲಗಿಸಿಹೋದೆನು ಎಂದರೆ ಸರಿಯಲ್ಲ. ನಂತರ ವಿಚಾರಿಸಿದಾಗ ಆರೋಪಿಯು ಚಾಸಾ-1ರಿಂದ 3 ಮತ್ತು ಮೃತ ಆನಂದನನ್ನು ಚಾಸಾ-4ರವರು ಫೌಂಡೇಷನ್ ಕೆಲಸಕ್ಕಾಗಿ ಕರೆದುಕೊಂಡು ಬಂದಿದ್ದನು, ಅಲ್ಲೆ ಫೌಂಡೇಷನ್ ಕೆಲಸ ಮಾಡಿಕೊಂಡು ಅವರೆಲ್ಲರೂ ಲೈನ್ ಮನೆಯಲ್ಲಿ ವಾಸವಿದ್ದರು ಆರೋಪಿಯು ಲೈನ್ಮನೆಗೆ ಪ್ರತಿದಿನ ಮದ್ಯವನ್ನು ತೆಗೆದುಕೊಂಡು ಬರುತ್ತಿದ್ದನು, ಎಲ್ಲರೂ ಒಟ್ಟಿಗೆ ಮದ್ಯಪಾನ ಮಾಡುತ್ತಿದ್ದರು, ಮದ್ಯಪಾನ ಮಾಡಿದ ಸಮಯದಲ್ಲಿ ಆರೋಪಿ ಮತ್ತು ಮೃತ ಆನಂದನ ನಡುವೆ ಆಗಾಗ್ಗೆ ಗಲಾಟೆ ನಡೆಯುತ್ತಿತ್ತು ಎಂದು ತಿಳಿಯಿತು ಎಂದರೆ ಸರಿಯಲ್ಲ. ಹಾಗೆಯೇ 4-6-22ರಂದು ಕೆಲಸ ಮುಗಿಸಿಕೊಂಡು ಸಂಜೆ 7ಗಂಟೆಗೆ ಆರೋಪಿಯು ಮದ್ಯಪಾನವನ್ನು ತೆಗೆದುಕೊಂಡು ಬಂದನು, ಅವರು ಮತ್ತು ಮೃತ ಆನಂದ ಹಾಗೂ ಚಾಸಾ-1 ರಿಂದ 3 ರವರು

ಮದ್ಯಪಾನ ಮಾಡಿ ಮಲಗಿದ ನಂತರ ಆನಂದ ಮತ್ತು ಆರೋಪಿ ಗಲಾಟೆ ಮಾಡಿಕೊಳ್ಳುತ್ತಲೇ ಇದ್ದರು, ರಾತ್ರಿ 11 ಗಂಟೆಗೆ ಚಾಸಾ-1 ರಿಂದ 3ರವರು ಅವರಿಬ್ಬರಿಗೂ ಸುಮ್ಮನೆ ಇರುವಂತೆ ಹೇಳಿದರೂ ಸಹ ಆರೋಪಿಗೆ ಆನಂದ ಇನ್ನೂ ಮದ್ಯಪಾನ ಬೇಕು ತೆಗೆದುಕೊಂಡು ಬಾ ಎಂದು ಗಲಾಟೆ ಮಾಡುತ್ತಿದ್ದನು, ಆಗ ಸತೀಶನು ಈಗ ಕುಡಿದಿರುವುದೇ ಸಾಕು ಇನ್ನು ಯಾವ ಮದ್ಯ ಬೇಕು ಎಂದು ಅವನಿಗೆ ಬೈದನು ಮತ್ತು ನೀನು ಬದುಕಿದ್ದರೆ ತಾನೇ ಮದ್ಯ ಕೇಳುವುದು ಮತ್ತು ಅದನ್ನು ಕುಡಿದು ಗಲಾಟೆ ಮಾಡುವುದು ಎಂದು ಅಲ್ಲೇ ಪಕ್ಕದಲ್ಲಿದ್ದ ಕಬ್ಬಿಣದ ಸುತ್ತಿಗೆ ತೆಗೆದು ಆನಂದನ ತಲೆಗೆ ಮತ್ತು ದೊಣ್ಣೆಯಿಂದ ಕೈಕಾಲುಗಳಿಗೆ ಹೊಡೆದು ಕೊಲೆ ಮಾಡಿದ ವಿಚಾರ ತಿಳಿಯಿತು ಎಂದರೆ ಸರಿಯಲ್ಲ. ನಂತರ ಕೃತ್ಯವನ್ನು ಮರೆಮಾಚುವ ಉದ್ದೇಶದಿಂದ ಲೈನ್ಮನೆಯ ಮುಂಭಾಗದಲ್ಲಿ ನಿರ್ಮಿಸುತ್ತಿದ್ದ ಫೌಂಡೇಷನ್ ನಲ್ಲಿ ಮಲಗಿಸಿದ ವಿಚಾರ ನನಗೆ ತಿಳಿಯಿತು ಎಂದರೆ ಸರಿಯಲ್ಲ. ಈ ಎಲ್ಲ ವಿಚಾರವಾಗಿ ಈಗ ನನಗೆಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಭಾಗವನ್ನು ನಿಪಿ-9 ಎಂದು ಗುರುತಿಸಲಾಯಿತು. ಆರೋಪಿ ನನಗೆ ಪರಿಚಯವಿದ್ದು ಆತ ಮೃತ ಆನಂದನನ್ನು ಕೊಲೆ ಮಾಡಿದ ವಿಚಾರ ತಿಳಿದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ಇಲ್ಲ ಎಂದು ಹೇಳುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**